# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003.**

ಸಂಖ್ಯೆ: ವೈ2(ಇ.ಪ)ಜೆ.,ರೇ.ವಾ.ನಿ:02/2019-20 ದಿನಾಂಕ: 10.05.2019.

## ದರಪಟ್ಟಿ ಆಹ್ವಾನ ಪತ್ರ

**ವಿಷಯ:** ಇತರೆ ಪರೀಕ್ಷೆಗಳ ವಿಭಾಗದಲ್ಲಿ ಜೆರಾಕ್ಸ್ ಯಂತ್ರ ಗಳು ಮತ್ತು ರೆಸೋಗ್ರಾಫ್ ಯಂತ್ರದ ವಾರ್ಷಿಕ ನಿರ್ವಹಣೆಗೆ ದರಪಟ್ಟಿ ಆಹ್ವಾನಿಸಿರುವ ಬಗ್ಗೆ

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಇತರೆ ಪರೀಕ್ಷೆಗಳ ವಿಭಾಗದಲ್ಲಿ ಒಟ್ಟು ಮೂರು ಜೆರಾಕ್ಸ್ ಕಮ್ ಪ್ರಿಂಟರ್ ಮತ್ತು ಒಂದು ರೆಸೋಗ್ರಾಫ್ ಯಂತ್ರದ ವಾರ್ಷಿಕ ನಿರ್ವಹಣೆಗಾಗಿ ಅರ್ಹ ಸಂಸ್ಥೆಗಳಿಂದ ದರಪಟ್ಟಿ ಆಹ್ವಾನಿಸಲಾಗಿದ್ದು, ಸಂಸ್ಥೆಗಳು ಈ ಕಾರ್ಯಕ್ಕೆ ತಗಲುವ ದರ ನಮೂದಿಸುವಲ್ಲಿ ಮೊತ್ತವನ್ನು ಕೆಳಕಂಡ ನಿಭಂದನೆಗಳಿಗೆ ಒಳಪಟ್ಟು ದಿನಾಂಕ:17-05-2019 ರಂದು ಸಂಜೆ 4 ಗಂಟೆಯೊಳಗೆ, ನಿರ್ದೇಶಕರು,(ಇತರೆ ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-03 ವಿಳಾಸಕ್ಕೆ ಮುದ್ದಾಂ/ಅಂಚೆ ಮೂಲಕ ತಲುಪಿಸಲು ತಿಳಿಸಿದೆ.

**ವಾರ್ಷಿಕ ನಿರ್ವಾಹಣೆಗಾಗಿ ಯಂತ್ರಗಳ ವಿವರ:-**

| ಕ್ರಸಂ | ಕಂಪನಿಯ ಹೆಸರು | ಯಂತ್ರದ ಹೆಸರು | ಮಾಡಲ್ ಮತ್ತು ಸೀರಿಯಲ್ ನಂ |
|---|---|---|---|
| 01 | **Toshiba & studio2007, Digital copier with Printer** | ಜೆರಾಕ್ಸ್ ಕಮ್ ಪ್ರಿಂಟರ್ | **T-305 , CML. 915027** |
| 02 | **Toshiba- e studio digital.** | ಜೆರಾಕ್ಸ್ ಕಮ್ ಪ್ರಿಂಟರ್ | **T.255 , CMC807009** |
| 03 | **Duplo** | **Duplicator** (ರೇಸೊಗ್ರಾಫರ್) | **DP-U550, 110954831** |

**ಷರತ್ತುಗಳು:-**

1. ಯಂತ್ರಗಳ ನಿರ್ವಹಣೆ ಕಾರ್ಯಕ್ಕೆ ಕರಾರು ಮಾಡಿಕೊಂಡ ಒಂದು ವರ್ಷದ ಅವಧಿಯವರೆಗೆ ನಿರ್ವಹಣೆ ಚಾಲ್ತಿಯಲ್ಲಿರುತ್ತದೆ.
2. ಯಂತ್ರಗಳ ವಾರ್ಷಿಕ ನಿರ್ವಹಣೆಗೆ ಸಂಬಂಧಿಸಿದಂತೆ ಒಟ್ಟಾರೆ ಅತಿ ಕಡಿಮೆ ದರ ನಮೂದಿಸುವ ಸಂಸ್ಥೆಯ ದರವನ್ನು ಮಾತ್ರ ಪರಿಗಣಿಸಲಾಗುವುದು. ಮತ್ತು ಎಲ್ಲಾ ತೆರಿಗೆ ಸೇರಿದಂತೆ ದರಗಳನ್ನು ನಮೂದಿಸುವುದು.
3. ಜೆರಾಕ್ಸ್ ಯಂತ್ರಗಳ ಮತ್ತು ರೇಸೋಗ್ರಾಫರ್ ಯಂತ್ರದ ದುರಸ್ತಿಗೆ ಅಗತ್ಯವಿದ್ದಾಗ ಈ ಕಛೇರಿಯಿಂದ ದೂರವಾಣಿಯಲ್ಲಿ ಸೂಚಿಸಿದ ಗರಿಷ್ಠ ಎರಡು ಘಂಟೆಯ ಒಳಗಾಗಿ ದುರಸ್ಥಿಕಾರ್ಯ ಮಾಡಬೇಕಾಗಿರುತ್ತದೆ.
4. ಜೆರಾಕ್ಸ್ ಯಂತ್ರಗಳ ಮತ್ತು ರೇಸೋಗ್ರಾಫ್ ಯಂತ್ರದ ದುರಸ್ತಿಗೆ ಮತ್ತು ಯಾವುದೇ ಬಿಡಿ ಭಾಗಗಳ ಜೋಡಣೆಗೆ ಯಾವುದೇ ಶುಲ್ಕ ವಿಧಿಸುವಂತಿಲ್ಲ.
5. ಅವಶ್ಯಕವಿದ್ದಲ್ಲಿ ಬಿಡಿ ಭಾಗಗಳನ್ನು ದುರಸ್ತಿದಾರರು ತಿಳಿಸಿದಂತೆ ಕಂಪನಿಯಿಂದ ತರಿಸಿ ನೀಡಲಾಗುವುದು. (ಟೋನರ್, ಡ್ರಂ ಕಿಟ್, ಫ್ಯೂಜರ್ ಕಿಟ್).
6. ಅವಶ್ಯ ಸಣ್ಣ ಪುಟ್ಟ ಬಿಡಿಭಾಗಗಳನ್ನು ಕರಾರು ಒಪ್ಪಂದ ಮಾಡಿಕೊಂಡ ಕಂಪನಿಯವರೇ ಅಳವಡಿಸಬೇಕಾಗಿರುತ್ತದೆ.
7. ಕಂಪನಿಗಳು ಈ ಕಾರ್ಯಕ್ಕೆ ಸೂಚಿಸುವ ದರಪಟ್ಟಿಗಳನ್ನು ಒಪ್ಪುವ, ತಿರಸ್ಕರಿಸುವ ಅಧಿಕಾರ ನಿರ್ದೇಶಕರು(ಇತರೆ ಪರೀಕ್ಷೆಗಳು) ರವರದ್ದಾಗಿರುತ್ತದೆ.

8. ಅನಿವಾರ್ಯ ಸಂದರ್ಭಗಳಲ್ಲಿ ಕಛೇರಿಗೆ ರಜಾ ಇದ್ದರೂ ಯಂತ್ರಗಳ ದುರಸ್ತಿ ಇದ್ದಲ್ಲಿ ದೂರವಾಣಿ ಮೂಲಕ ತಿಳಿಸಿದ ತಕ್ಷಣ ಬಂದು ದುರಸ್ತಿಗೊಳಿಸಬೇಕಾಗಿರುತ್ತದೆ.

9. ವಾರ್ಷಿಕ ನಿರ್ವಹಣೆಯ ಮೊತ್ತವನ್ನು 2 ಕಂತುಗಳಲ್ಲಿ ಅಂದರೆ ಆರು ತಿಂಗಳಿಗೊಮ್ಮೆ ಮತ್ತುಕರಾರು ಮಾಡಿಕೊಂಡಾಗ ಮತ್ತು ಕರಾರು ಅವಧಿ ಪೂರ್ಣಗೊಂಡ ನಂತರ ಪಾವತಿಸಲಾಗುವುದು.

ನಿರ್ದೇಶಕರು
(ಇತರೆ ಪರೀಕ್ಷೆಗಳು)

**ಪ್ರತಿಗಳು:–**

1) ಮಂಡಳಿಯ ಅಂತರ್ ಜಾಲದಲ್ಲಿ ಪ್ರಕಟಿಸಲು,
2) ಮಂಡಳಿಯ ಸೂಚನಾ ಫಲಕಕ್ಕೆ
3) ಕಛೇರಿ ಪ್ರತಿ.